ಜೆ.ಆರ್.ಓ (2ಎ)

ಜೆ.ಆರ್.ಓ (3)

ಜೆ.ಆರ್.ಓ (4)

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

752 (1430); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

(ಅ) ಮಂಡ್ಯ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಮತ್ತು ಮಂಜೂರಾಗಿರುವ ವಿವಿಧ ಶ್ರೇಣಿಯ ವೈದ್ಯಾಧಿಕಾರಿಗಳು, ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ, ತಂತ್ರಜ್ಞರು, ಲಿಪಿಕ ಮತ್ತು ಗ್ರೂಪ್-ಡಿ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಡ್ಯ ಜಿಲ್ಲೆಯಲ್ಲಿ ವರದಿಯಾಗಿರುವ ಡೆಂಗ್ಯೂ ಜ್ವರದ ಮತ್ತು ಎಚ್1ಎನ್1 ಪ್ರಕರಣಗಳ ಸಂಖ್ಯೆ ಎಷ್ಟು; ಈ ಬಗ್ಗೆ ಕೈಗೊಂಡಿರುವ ಚಿಕಿತ್ಸಾ ಹಾಗೂ ಮುಂಜಾಗರೂಕತಾ ಕ್ರಮಗಳೇನು; (ವಿವರ ಒದಗಿಸುವುದು)

(ಇ) ಮಂಡ್ಯ ಜಿಲ್ಲೆಯ ಯಾವ ಯಾವ ತಾಲ್ಲೂಕು ಕೇಂದ್ರಗಳಿಗೆ ಡಯಾಲಿಸಿಸ್ ಕೇಂದ್ರಗಳು ಮಂಜೂರಾಗಿವೆ; ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಿ ತಂತ್ರಜ್ಞರನ್ನು ನೇಮಿಸಿ ಕಾರ್ಯಾಚರಣೆ ಆರಂಭಿಸಲಾಗಿದೆಯೇ;

(ಈ) ಮಂಡ್ಯ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿರುವ, ನಿರ್ಮಾಣವಾಗಬೇಕಾಗಿರುವ, ನಿರ್ಮಾಣವಾಗಿ ಉದ್ಘಾಟನೆ ಕಾಯ್ದಿರುವ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳು ಯಾವುವು? (ವಿವರ ನೀಡುವುದು)

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

(ಆ) ಮುಂಜಾಗರೂಕತಾ ಕ್ರಮಗಳನ್ನು ಅನುಬಂಧ– 2 ರಲ್ಲಿ ನೀಡಲಾಗಿದೆ.

(ಇ) ಮಂಡ್ಯ ಜಿಲ್ಲೆಯಲ್ಲಿ ಮಳವಳ್ಳಿ ತಾಲ್ಲೂಕಿಗೆ ಡಯಾಲಿಸಿಸ್ ಕೇಂದ್ರವನ್ನು ಮಂಜೂರು ಮಾಡಲಾಗಿದೆ. ಸಿವಿಲ್ ಕಾಮಗಾರಿ ಪೂರ್ಣಗೊಂಡ ನಂತರ ಪ್ರಾರಂಭಿಸಲಾಗುವುದು.

(ಈ) ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ.

ಪ್ರಶ್ನೆ ಸಂಖ್ಯೆ : 1430

Page 61

6

6ನೆಬಂಧ – 1

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಮಂಡ್ಯ.

ಮಂಡ್ಯ ಜಿಲ್ಲೆಯ ಗ್ರೂಪ್ ಎ, ಬಿ, ಸಿ ಮತ್ತು ಡಿ ಹುದ್ದೆಗಳ ಮಂಜೂರು,ಭರ್ತಿ ಖಾಲಿ ವಿವರ 27.06.2014 ರಲ್ಲಿದ್ದಂತೆ

ಕ್ರ.ಸಂ	ಕವರಾಗು	ಮಂಡ್ಯ			ಮದ್ದೂರು			ಮಳವಳ್ಳಿ			ಶ್ರೀರಂಗಪಟ್ಟಣ			ಪಾಂಡವಪುರ			ನಾಗಮಂಗಲ			ಕೆ ಆರ್ ಪೇಟೆ			ಒಟ್ಟು		
		ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ	ಮಂ	ಭ	ಖಾ
1	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ	1	1	0	-	-	-	-	-	-	-	-	-	-	-	-	-	-	-	-	-	-	1	1	0
2	ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ	8	8	0	-	-	-	-	-	-	-	-	-	-	-	-	-	-	-	-	-	-	8	8	0
3	ತಾಲ್ಲೂಕು ಆರೋಗ್ಯಾಧಿಕಾರಿ	1	1	0	1	1	0	1	1	0	1	1	0	1	1	0	1	1	0	1	1	0	7	7	0
4	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ	41	35	6	26	20	6	26	22	4	13	8	5	9	8	1	14	10	4	24	19	5	153	122	31
5	ಹಿರಿಯ ವೈದ್ಯಾಧಿಕಾರಿ	-	-	-	1	0	1	1	1	0	1	1	0	2	1	1	1	1	2	1	1	0	9	5	4
6	ದಂತ್ಯ ವೈದ್ಯಾಧಿಕಾರಿ	-	-	-	1	0	1	1	0	1	1	0	1	1	0	1	1	0	1	1	0	1	6	0	6
7	ಶುಶ್ರೂಷಕಿಯರು	-	-	-	12	9	3	9	7	2	10	9	1	10	6	4	11	7	4	7	5	2	70	50	20
8	ಔಷಧ ವೈದ್ಯಾಧಿಕಾರಿ	-	-	-	7	7	0	1	1	0	2	2	0	3	3	0	4	3	1	2	0	2	14	11	3
9	ಲೆಕ್ಕಿಗ	1	1	0	1	1	0	1	1	0	1	1	0	1	1	0	-	-	-	-	-	-	5	5	0
10	ಆಡಳಿತಾಧಿಕಾರಿ	1	1	0	-	-	-	-	-	-	-	-	-	-	-	-	-	-	-	-	-	-	1	1	0
11	ಗಣಕಯಂತ್ರ ಆಪರೇಟರ್	1	0	1	-	-	-	-	-	-	-	-	-	-	-	-	-	-	-	-	-	-	1	1	0
12	ಮಹಿಳಾ ಆರೋಗ್ಯಕರು	1	0	1	-	-	-	-	-	-	-	-	-	-	-	-	-	-	-	-	-	-	1	1	0
13	ಕಿರಿಯ ಆರೋಗ್ಯಕರು	4	2	2	2	1	1	1	0	1	2	1	1	2	0	2	3	0	3	2	0	2	16	4	12
14	ಪ ದ ಕ	24	18	6	14	7	7	17	5	12	7	5	2	9	3	6	10	4	6	13	4	9	94	49	45

Page 03

40	ಮೇಸ್ತ್ರಿ	1	0	1	0	0	0	0	0	0	0	0	0	0	0	0	0	0	0	0	0	0	1	0	1
41	ಹಿ ಮ ಆ ಸಹಾಯಕ	10	6	4	9	0	9	9	4	5	5	4	1	7	3	4	9	3	6	9	9	0	58	32	26
42	ಹಿ ಮು.ಆ.ಸಹಾಯಕ	13	11	2	7	4	3	6	3	3	6	5	1	4	2	2	7	2	5	6	2	4	49	29	20
43	ಕ.ಮ.ಆ.ಸಹಾಯಕ	85	81	4	66	52	14	66	50	16	47	44	3	44	40	4	54	33	21	64	31	33	426	331	95
44	ಕ.ಮು ಆ ಸಹಾಯಕ	53	35	18	31	12	19	30	16	14	21	14	7	23	18	5	29	26	3	27	14	13	214	135	79
45	ಗ್ರೂಪ್ ಡಿ	97	75	22	115	57	57	98	44	54	64	24	40	62	26	36	82	26	56	88	26	62	606	277	329

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ
ಮತ್ತು ಜಿಲ್ಲಾ ಪಂಚಾಯತ್ ಮುಂದಿನ

ಅನುಬಂಧ – 2

ಮಂಡ್ಯ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 26.06.2014ರ ವರೆಗೆ ವರದಿಯಾಗಿರುವ ಡೆಂಗಿ ಜ್ವರ ಮತ್ತು ಹೆಚ್1ಎನ್1 ಪ್ರಕರಣಗಳ ಒಟ್ಟು ಸಂಖ್ಯೆ ಹೀಗಿದೆ

ಡೆಂಗಿಜ್ವರ– 06 (ಪ್ರಕರಣಗಳು) ಹೆಚ್1ಎನ್1: 07 (ಪ್ರಕರಣಗಳು)

ಡೆಂಗಿ ಜ್ವರ ಚಿಕಿತ್ಸೆ ಮತ್ತು ನಿಯಂತ್ರಣಕ್ಕಾಗಿ ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳು

1. ಗ್ರಾಮ ಮಟ್ಟದಲ್ಲಿ ಆರೋಗ್ಯ ಕಾರ್ಯಕರ್ತರು, ಆಶಾ ಕಾರ್ಯ ಕರ್ತರ ಮೂಲಕ ದೈನಂದಿನ ಜ್ವರ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳ ಲಾಗುತ್ತಿದ್ದು, ಈ ಸಮೀಕ್ಷೆಯಲ್ಲಿ ಡೆಂಗಿ ಜ್ವರ ಪ್ರಕರಣಗಳನ್ನು ಗುರುತಿ ಸಲಾಗುತ್ತಿದೆ.

2. ಇಂತಹ ಸಂಶಯಾಸ್ಪದ ಡೆಂಗ್ಯೂ ಪ್ರಕರಣಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ಗುರುತಿಸಿ, ರೋಗ ಲಕ್ಷಣದ ಆಧಾರದ ಮೇಲೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

3. ಜ್ವರ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದಲ್ಲಿ ಸದರಿ ಗ್ರಾಮಗಳಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳು ಇಲ್ಲವೆ ಸಂಚಾರಿ ಚಿಕಿತ್ಸಾಲಯಗಳನ್ನು ಸ್ಥಾಪಿಸಿ ಗ್ರಾಮ ಮಟ್ಟದಲ್ಲಿ ಚಿಕಿತ್ಸೆ ನೀಡುವ ಸೌಲಭ್ಯಗಳನ್ನು ಕಲ್ಪಿಸ ಲಾಗುತ್ತದೆ.

4. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಡೆಂಗಿ ರೋಗಿಗಳ ಚಿಕಿತ್ಸೆ ಮತ್ತು ನಿರ್ವಹಣೆಗೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಅವಶ್ಯ ತರಬೇತಿ ನೀಡಿ ಪ್ರಾಥಮಿಕ ಹಂತದ ಡೆಂಗಿ ರೋಗಿಗಳನ್ನು ಚಿಕಿತ್ಸೆ ಮಾಡಲು ವ್ಯವಸ್ಥೆ ಮಾಡಲಾಗಿದೆ ಹಾಗೂ ಜಟಿಲ ಡೆಂಗಿ ರೋಗಿ

ಗಳನ್ನು ತಡಮಾಡದೆ ಆದಷ್ಟೂ ಬೇಗ ಹೆಚ್ಚಿನ ಚಿಕಿತ್ಸೆಗೆ ಹತ್ತಿರದ ಮೇಲ್ದರ್ಜೆ ಆಸ್ಪತ್ರೆಗೆ ರವಾನಿಸುವಂತೆ ಸೂಚಿಸಲಾಗಿದೆ.

5. ಸಾಕಷ್ಟು ಪ್ರಮಾಣದಲ್ಲಿ ಜೀವರಕ್ಷಕ ಔಷಧಿಗಳು ಹಾಗೂ ರೋಗ ಲಕ್ಷಣಗಳ ಉಪಶಮನಕ್ಕೆ ಬೇಕಾದ ಔಷಧಿಗಳು ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುತ್ತದೆ.

6. ಶೇ. 5–10 ಸಂಶಯಾಸ್ಪದ ಡೆಂಗಿ ಪ್ರಕರಣಗಳಿಂದ ರಕ್ತದ ಮಾದರಿಯನ್ನು ಸಂಗ್ರಹಿಸಿ ಜಿಲ್ಲಾ ಪ್ರಯೋಗಶಾಲೆ ಮಂಡ್ಯದಲ್ಲಿ ಪರೀಕ್ಷಿಸಿ ದೃಢೀಕರಿಸಲಾಗುತ್ತಿದೆ. ಇದುವರೆವಿಗೂ 30 ರಕ್ತದ ಮಾದರಿಗಳನ್ನು ಪರೀಕ್ಷಿಸಲಾಗಿದ್ದು ಇವುಗಳ ಪೈಕಿ 5 ಡೆಂಗಿ 2 ಚಿಕುಂಗುನ್ಯ ಪ್ರಕರಣಗಳು ದೃಢಪಟ್ಟಿದೆ.

7. ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾಯ ತಾಲ್ಲೂಕು ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡಗಳನ್ನು ರಚಿಸಲಾಗಿದ್ದು, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಅಗತ್ಯತೆಗನುಗುಣವಾಗಿ ಕ್ರಮ ವಹಿಸಲಾಗುತ್ತಿದೆ.

8. ಡೆಂಗ್ಯೂ ಪ್ರಕರಣಗಳು ವರದಿಯಾದ ಗೃಹಮದಲ್ಲಿ ಮನೆ, ಮನೆ ಭೇಟಿ ನೀಡಿ ಲಾರ್ವಾ ಸಮೀಕ್ಷೆ ನಡೆಸಿ, ಲಾರ್ವಾ, ಉತ್ಪತ್ತಿ ತಾಣಗಳ ನಿರ್ಮೂಲನೆ ಮಾಡಲು ಪ್ರಾಥಮಿಕ ಆರೋಗ್ಯ ಕೇಂದ್ರದ ಕ್ಷೇತ್ರ ಆರೋಗ್ಯ ಸಿಬ್ಬಂದಿಗಳ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ.

9. ಸಾರ್ವಜನಿಕರಿಗೆ ಡೆಂಗ್ಯೂ ಜ್ವರದ ಬಗ್ಗೆ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಸಭೆಗಳನ್ನು ನಡೆಸಿ ಚಲನಚಿತ್ರ ಪ್ರದರ್ಶನದ ಮೂಲಕ ಅರಿವು ಮೂಡಿಸಲಾಗುತ್ತಿದ್ದು, ಸೊಳ್ಳೆ ಕಡಿತದಿಂದ ಪಾರಾಗಲು ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸುವಂತೆ ತಿಳುವಳಿಕೆ ನೀಡಲಾಗುತ್ತಿದೆ.

10. ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆಗಳಿಗೆ ಭೇಟಿ ನೀಡಿ ಅಧ್ಯಕ್ಷರು, ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಮುಖ್ಯಾಧಿ ಕಾರಿಗಳು, ಆಯುಕ್ತರು ಇವರನ್ನು ಭೇಟಿ ಮಾಡಿ ಕ್ಷೇತ್ರದ ಶುಚಿತ್ವ ಮತ್ತು ನೈರ್ಮಲ್ಯ ಕಾಪಾಡುವುದರ ಜೊತೆಗೆ ನಿರುಪಯುಕ್ತ ಘನ ತ್ಯಾಜ್ಯ ವಸ್ತುಗಳ ಸೂಕ್ತ ವಿಲೇವಾರಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

11. ಶಾಲಾ ಕಾಲೇಜುಗಳಲ್ಲಿ ಡೆಂಗ್ಯೂ ನಿಯಂತ್ರಣದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

12. 2014–15 ನೇ ಸಾಲಿನ ಎನ್‌ಹೆಚ್‌ಎಂ–ಎನ್‌ವಿಬಿಡಿಸಿಪಿ ಕಾರ್ಯ ಕ್ರಮದಡಿಯಲ್ಲಿ ಮಂಡ್ಯ ಜಿಲ್ಲೆಗೆ ಡೆಂಗಿ/ಚಿಕುಂಗುನ್ಯ ನಿಯಂತ್ರಣಕ್ಕಾಗಿ `16.16 ಲಕ್ಷಗಳ ಅನುದಾನವನ್ನು ಕೋರಲಾಗಿದ್ದು ಭಾರತ ಸರ್ಕಾರದ ಅನುಮೋದನೆ ನಿರೀಕ್ಷಿಲಸಾಗಿದೆ. ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಸದ್ಯಕ್ಕೆ `3.00 ಲಕ್ಷಗಳನ್ನು ತುರ್ತಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

13. ಈ ಬಾರಿ ವಿಶ್ವ ಆರೋಗ್ಯ ಸಂಸ್ಥೆಯು ವಿಶ್ವ ಆರೋಗ್ಯ ದಿನಾ ಚರಣೆಯ ಅಂಗವಾಗಿ ರೋಗವಾಹಕ ರೋಗಗಳಿಗೆ ಹೆಚ್ಚಿನ ಮಹತ್ವ ನೀಡಿ ಸಣ್ಣ ಕಡಿತ ದೊಡ್ಡ ಅಪಾಯ ಎಂಬ ಘೋಷಣೆಯನ್ನು ನೀಡಿರುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಹಾಗೂ 7 ತಾಲ್ಲೂಕು ಮತ್ತು 103 ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ವಿಶ್ವ ಆರೋಗ್ಯ ದಿನಾಚರಣೆಯನ್ನು ಆಚರಿಸಿ ಡೆಂಗಿ ಮತ್ತು ಇತರೆ ರೋಗವಾಹಕ ರೋಗಗಳ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.

14. ಜುಲೈ ಮಾಹೆಯನ್ನು ಡೆಂಗಿ ವಿರೋಧಿ ಮಾಸ ಎಂದು ಗುರುತಿಸಿ, ನೀರಿನ ಶೇಖರಣಾ ವಿಧಾನ, ಘನ ತ್ಯಾಜ್ಯದ ವಿಲೇವಾರಿ, ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಲು ವಿಧಾನ ಇವುಗಳ ಬಗ್ಗೆ ವ್ಯಾಪಕ ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು.

ಜಿಲ್ಲೆಯಲ್ಲಿ ಪೂರ್ವಭಾವಿಯಾಗಿ ಹಿಂದಿನ ವರ್ಷದ ಪ್ರಕರಣಗಳ ವರಧಿಯನ್ನಾಧರಿಸಿ ಸಮಸ್ಯಾತ್ಮಕ ಪ್ರಾಥಮಿಕ ಆರೋಗ್ಯ ಕೇಂದ್ರ ಗಳನ್ನು ಗುರುತಿಸಿ ಸ್ವಯಂಸೇವಕರಿಗೆ ತರಬೇತಿ ನೀಡಿ ಆಗಸ್ಟ್ 2013 ರಿಂದ ಜನವರಿ 2014ರ ವರೆಗೆ ಪ್ರತಿ ಹದಿನೈದು ದಿನಕ್ಕೊಮ್ಮೆ ಒಂದು ಸಾವಿರ ಮನೆಗಳಲ್ಲಿ ಲಾರ್ವಾ ಸಮೀಕ್ಷೆ ಮತ್ತು ನಿರ್ಮೂಲನೆ ಕ್ರಮ ಕೈಗೊಳ್ಳಲಾಗಿದೆ.

ಹೆಚ್1ಎನ್1 ಚಿಕಿತ್ಸೆ ಮತ್ತು ನಿಯಂತ್ರಣಕ್ಕಾಗಿ ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳು:

1. ಸಂಶಯಾಸ್ಪದ ಪ್ರಕರಣಗಳು ವರದಿಯಾದಾಗ, ಜಿಲ್ಲಾ ಸರ್ವೇಕ್ಷಣಾ ಘಟಕದಿಂದ ಗಂಟಲು ಕೋಶದ ಮಾದರಿಯನ್ನು ಸಂಗ್ರಹಿಸಿ ನಿಮ್ಹಾನ್ಸ್ ಸಂಸ್ಥೆಗೆ ಕಳುಹಿಸಿ ಪರಿಶೀಲನಾ ವರದಿಯನ್ನು ಪಡೆಯ ಲಾಗುತ್ತಿದೆ.

2. ಟಾಮಿಫ್ಲೂ ಮಾತ್ರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಜಿಲ್ಲೆಯಲ್ಲಿ ದಾಸ್ತಾನು ಇಟ್ಟಿದ್ದು 'ಬಿ' ಮತ್ತು 'ಸಿ' ವರ್ಗದ ರೋಗಿಗಳಿಗೆ ಟಾಮಿಫ್ಲೂ ಮಾತ್ರೆಗಳನ್ನು ನೀಡುವ ಏರ್ಪಾಡು ಮಾಡಲಾಗಿದೆ 'ಎ' ವರ್ಗೀಕರಣದಲ್ಲಿರುವ ರೋಗಿಗಳನ್ನು ಅನುಸರಣೆ ಮಾಡಲಾಗುತ್ತಿದೆ.

3. ಹೆಚ್1ಎನ್1 ಪ್ರಕರಣಗಳು ವರದಿಯಾದ ಗ್ರಾಮಗಳಲ್ಲಿ, ಮನೆಮನೆ ಭೇಟಿ ನೀಡಿ ಸಮೀಕ್ಷೆ ನಡೆಸಲು ಪ್ರಾಥಮಿಕ ಆರೋಗ್ಯ ಕೇಂದ್ರದ ಕ್ಷೇತ್ರ ಆರೋಗ್ಯ ಸಿಬ್ಬಂದಿ ವರ್ಗದವರನ್ನು ನಿಯೋಜಿಸಲಾಗಿದೆ.

4. ಸದರಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಆಯಾಯ ತಾಲ್ಲೂಕು ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆಯನ್ನು ರಚಿಸಲಾಗಿದ್ದು, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿರ್ವಹಿಸಲಾಗುತ್ತಿದೆ.

5. ಸದರಿ ರೋಗಿಗಳ ಮನೆಯ ಜನರಿಗೆ ಸಂಪರ್ಕ ಚಿಕಿತ್ಸೆಯಾಗಿ, ಟ್ಯಾಮಿ ಫ್ಲೂ ಮಾತ್ರೆಯನ್ನು ನೀಡಲಾಗಿದೆ.

6. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯು ಸಹ ಟ್ಯಾಮಿಫ್ಲೂ ಮಾತ್ರೆಗಳನ್ನು ದಾಸ್ತಾನು ಇರಿಸಲಾಗಿದೆ.

7. ವರದಿಯಾದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆಗಳಿಗೆ ಭೇಟಿ ನೀಡಿ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಭೇಟಿ ಮಾಡಿ, ಗ್ರಾಮದ ಶುಚಿತ್ವ ಮತ್ತು ನೈರ್ಮಲ್ಯ ಕಾಪಾಡಲು ಅಗತ್ಯ ಕ್ರಮ ವಹಿಸಲು ತಿಳಿಸಿದೆ.

8. ಪ್ರಕರಣ ವರದಿಯಾದ ಪ್ರದೇಶದ ಜನರಿಗೆ ಕೀಟವಾಹಕ ರೋಗಗಳು, ಗಾಳಿಯಿಂದ ಹರಡುವ ರೋಗಗಳು, ಹಾಗೂ ನೀರಿನಿಂದ ಹರಡುವ ಸಾಂಕ್ರಾಮಿಕ ರೋಗಗಳ ಬಗ್ಗೆ ಸಮಗ್ರ ಆರೋಗ್ಯ ಶಿಕ್ಷಣ ನೀಡಲಾಗಿದೆ.

9. ಪ್ರಕರಣ ವರದಿಯಾದ ರೋಗಿಯ ಮನೆಯವರು ಮತ್ತು ಗ್ರಾಮದ ಜನರಿಗೆ ವೈಯಕ್ತಿಕ ಶುಚಿತ್ವ ಹಾಗೂ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಿದೆ.

ಹೆಚ್1ಎನ್1 ರೋಗ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಸಮಗ್ರ ಆರೋಗ್ಯ ಶಿಕ್ಷಣ ನೀಡಲಾಗಿದ್ದ, ಸಾರ್ವಜನಿಕರಿಗೆ ಅರಿವು ಮೂಡಿಸಲು ಕರಪತ್ರಗಳು ಹಾಗೂ ಪೋಸ್ಟರ್‌ಗಳನ್ನು ವಿತರಿಸಲು ಕ್ರಮ ವಹಿಸಲಾಗಿದೆ. ಪ್ರಕರಣ ವರದಿಯಾದ ಪ್ರದೇಶದ ಜನರಿಗೆ ಆರೋಗ್ಯ ಶಿಕ್ಷಣ ನೀಡಲು ಹೆಚ್1ಎನ್1 ರೋಗ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಲನಚಿತ್ರ ಪ್ರದರ್ಶನ ಮಾಡುವ ಮೂಲಕ ಅರಿವು ಮೂಡಿಸಿದೆ.

ಅನುಬಂಧ–3

ಪ್ರಾಥಮಿಕ ಆರೋಗ್ಯ ಕೇಂದ್ರಗಳು:

1) ಅಕ್ಕಿಹೆಬ್ಬಾಳು, ಕೆ.ಆರ್.ಪೇಟೆ, ತಾಲ್ಲೂಕು

2) ಬೇಬಿ, ಮಂಡ್ಯ ತಾಲ್ಲೂಕು

3) ಹೊಳಲು, ಮಂಡ್ಯ ತಾಲ್ಲೂಕು

4) ದೊಡ್ಡರಸಿನಕೆರೆ, ಮದ್ದೂರು, ತಾಲ್ಲೂಕು

5) ಕೊಪ್ಪ, ಮದ್ದೂರು ತಾಲ್ಲೂಕು

ಸಮುದಾಯ ಆರೋಗ್ಯ ಕೇಂದ್ರಗಳು

1) ಶಿವಳ್ಳಿ ಮಂಡ್ಯ ತಾಲ್ಲೂಕು

2) ಕೀಲಾರ, ಮಂಡ್ಯ ತಾಲ್ಲೂಕು

3) ಕಿಕ್ಕೇರಿ, ನಿವೇಶನದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು, ಕಟ್ಟಡದ ನಿರ್ಮಾಣಕ್ಕೆ ತಡೆಯಾಜ್ಞೆ ಇದೆ.

ನಿರ್ಮಾಣವಾಗಿದ್ದು, ಉದ್ಘಾಟನೆಗೆ ಕಾಯ್ದಿರುವ ಕಟ್ಟಡಗಳು:

ಪ್ರಾಥಮಿಕ ಆರೋಗ್ಯ ಕೇಂದ್ರಗಳು:

1. ಕೆ. ಗೌಡಗೆರೆ, ಮಂಡ್ಯ ತಾಲ್ಲೂಕು

2. ಹಿರೇಕಹಳೆ, ಕೆ.ಆರ್.ಪೇಟೆ, ತಾಲ್ಲೂಕು

3. ಸಾಸಲು, ಕೆ.ಆರ್.ಪೇಟೆ, ತಾಲ್ಲೂಕು

ಸಮುದಾಯ ಆರೋಗ್ಯ ಕೇಂದ್ರಗಳು.

1. ಕಿರುಗಾವಲು, ಮಳವಳ್ಳಿ, ತಾಲ್ಲೂಕು,

2. ಬೂಕನಕೆರೆ, ಕೆ.ಆರ್.ಪೇಟೆ, ತಾಲ್ಲೂಕು

ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಖಾಲಿ ಹುದ್ದೆಗಳು

753 (1431); ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ)

(ಅ) ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವಿವರ ಒದಗಿಸುವುದು;